ದಿನಾಂಕ 13.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಜಿ ಎನ್ ಆರ್ ವಕೀಲರಿಂದಃ</u>**

1) ನಾನು ಈ ದಾವೆಯಲ್ಲಿ **1**ನೇ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿರುತ್ತೆ ಮತ್ತು ಪ್ರಮಾಣ ಪತ್ರದಲ್ಲಿ ಕಂಡುಬರುವ ಸಹಿ ನನ್ನದಿರುತ್ತದೆ.

2) ನಮ್ಮ ಕುಟುಂಬದಲ್ಲಿ ರತ್ನಯ್ಯಶೆಟ್ಟಿ, ವೆಂಕಟಾಚಲಪತಿಗುಪ್ತ ಮತ್ತು ನಾರಾಯಣಸ್ವಾಮಿ ರವರ ನಡುವೆ ಆದ ವಿಭಾಗಪತ್ರವಾಗಿರುತ್ತದೆ ಸದರಿ ದಾಖಲಾತಿಯ ಅಸಲು ಪ್ರತಿ 3ನೇ ಪ್ರತಿವಾದಿ ನಾರಾಯಣಸ್ವಾಮಿ ರವರ ಬಳಿ ಇರುತ್ತದೆ, ಹಾಗಾಗಿ ಅದರ ಧೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ದಾವಾಸ್ವತ್ತಿನ ಸಂಬಂಧ ಖಾತಾಎಕ್ಸ್ ಟ್ರ್ಯಾಕ್ಟಿನ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **<u>ನಿಪಿ1</u>** ಎಂದು ಗುರುತಿಸಲಾಯಿತು. ನನ್ನ ತಾಯಿಯ ಬಾಬ್ತು ಮರಣಸಮರ್ಥನಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **<u>ನಿಪಿ2</u>** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರುತ್ತಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**
**ಸಹಿ/-**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**